VIDYAVARDHAKA LAW COLLEGE LIBRARY MYSURU

2082/2083

# VI Semester 3 Year LL.B./IV Semester 3 Year LL.B. Examination, Oct./Nov. 2021
# LABOUR LAW – II

Duration : 3 Hours

Max. Marks : 100

**Instructions : 1. Answer Q. No. 11 and any five of the remaining questions.**
**2. Q. No. 11 carries 20 marks and the remaining questions carry 16 marks each.**
**3. Answer should be written in English or Kannada completely.**

Q. No. 1. Discuss the composition, tenure and other terms and conditions of local complaints committee under Sexual Harassment of Women at Workplace (Prevention, Prohibition and Redressal) Act, 2013. Marks : 16

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಅಧಿನಿಯಮ, 2013ರ ಅಡಿಯಲ್ಲಿ ಸ್ಥಳೀಯ ದೂರು ಸಮಿತಿಯ ರಚನೆ, ಅವಧಿ ಮತ್ತು ಇತರ ಷರತ್ತುಗಳ ಬಗ್ಗೆ ಚರ್ಚಿಸಿ.

Q. No. 2. Briefly explain the objectives of Equal Remuneration Act, 1976. Marks : 16

ಸಮಾನ ವೇತನ ಅಧಿನಿಯಮ, 1976ರ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

Q. No. 3. Discuss Labour Laws with reference to Directive Principles of State policy. Marks : 16

ರಾಜ್ಯ ನೀತಿ ನಿರ್ದೇಶನ ತತ್ವಗಳ ಅಡಿಯಲ್ಲಿ ಕಾರ್ಮಿಕರ ಕಾನೂನನ್ನು ಚರ್ಚಿಸಿ.

Q. No. 4. Discuss the problems of Bonded Labour system. Marks : 16

ಜೀತ ಕಾರ್ಮಿಕ ಪದ್ಧತಿಯ ಸಮಸ್ಯೆಗಳನ್ನು ಚರ್ಚಿಸಿ.

Q. No. 5. State the scope and objectives of the Payment of Gratuity Act, 1972. Marks : 16

ಗ್ರಾಚ್ಯುಟಿ ಪಾವತಿ ಅಧಿನಿಯಮ, 1972ರ ವ್ಯಾಪ್ತಿ ಮತ್ತು ಉದ್ದೇಶಗಳನ್ನು ಉಲ್ಲೇಖಿಸಿರಿ.

Q. No. 6. State the main objective for passing The Child Labour (Prohibition and Regulation) Act, 1986. Marks : 16

ಬಾಲಕಾರ್ಮಿಕ (ನಿರ್ಬಂಧ ಮತ್ತು ನಿಯಂತ್ರಣ) ಅಧಿನಿಯಮ, 1986ನ್ನು ಜಾರಿಗೊಳಿಸಲು ಪ್ರಮುಖ ಉದ್ದೇಶಗಳನ್ನು ಉಲ್ಲೇಖಿಸಿ.

Q. No. 7. Explain the registration procedure and authorities under the Karnataka Shops and Commercial Establishments Act, 1961. Marks : 16

ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆ ಕಾಯ್ದೆ, 1961ರ ಅಡಿಯಲ್ಲಿ ನೋಂದಣಿ ಪ್ರಕ್ರಿಯೆ ಮತ್ತು ಪ್ರಾಧಿಕಾರಗಳನ್ನು ವಿವರಿಸಿರಿ.

Q. No. 8. Explain the concept of 'Bonus'. What is the Quantum of Maximum bonus ? How is it calculated ? Marks : 16

'ಬೋನಸ್'ನ ಪರಿಕಲ್ಪನೆಯನ್ನು ವಿವರಿಸಿರಿ. ಬೋನಸ್ಸಿನ ಗರಿಷ್ಠ ಮಿತಿಯೇನು ? ಇದನ್ನು ಹೇಗೆ ನಿರ್ಧರಿಸಲಾಗುತ್ತದೆ ?

Q. No. 9. Define 'unorganized worker' and discuss the administrative mechanism, its composition and powers under the Unorganized Workers Social Security Act – 2008. Marks : 16

'ಅಸಂಘಟಿತ ಕಾರ್ಮಿಕ' ವ್ಯಾಖ್ಯಾನಿಸಿ ಮತ್ತು ಅಸಂಘಟಿತ ಕಾರ್ಮಿಕ ಸಾಮಾಜಿಕ ಭದ್ರತೆ ಕಾಯಿದೆ, 2008ರಡಿಯಲ್ಲಿ ಆಡಳಿತ ವ್ಯವಸ್ಥೆ, ಅದರ ಸಂಯೋಜನೆ ಮತ್ತು ಅಧಿಕಾರಗಳನ್ನು ವಿವರಿಸಿರಿ.

Q. No. 10. Write short notes on **any two** of the following : Marks : 2×8=16

ಕೆಳಗಿನವುಗಳಲ್ಲಿ ಯಾವುದೇ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Inter-state migrant workmen.

ಅಂತರ ರಾಜ್ಯ ವಲಸೆ ಕಾರ್ಮಿಕ.

(b) Effect of Globalisation on industry and labour.

ಕೈಗಾರಿಕೆ ಮತ್ತು ಕಾರ್ಮಿಕರ ಮೇಲೆ ಜಾಗತೀಕರಣದ ಪ್ರಭಾವ.

(c) Illegal deductions under Payment of Wages Act, 1936.

ವೇತನ ಪಾವತಿ ಅಧಿನಿಯಮ, 1936ರ ಅಡಿಯಲ್ಲಿ ಇರುವ ಕಾನೂನು ಬಾಹಿರ ಕಡಿತಗಳು.

Q. No. 11. Solve **any two** of the following problems : Marks : 2×10=20

ಕೆಳಗಿನವುಗಳಲ್ಲಿ ಯಾವುದೇ ಎರಡು ಸಮಸ್ಯೆಗಳನ್ನು ಪರಿಹರಿಸಿರಿ :

(a) Jawahar Mills enters into an agreement with its workers for deductions of various amounts not expressly authorised under the Payment of Wages Act, 1936. Advice Jawahar Mills manager.

ಜವಾಹರ್ ಮಿಲ್ಸ್‌ರವರು ತನ್ನ ಕಾರ್ಮಿಕರೊಂದಿಗೆ ವೇತನ ಪಾವತಿ ಅಧಿನಿಯಮ, 1936ರ ಅಡಿಯಲ್ಲಿ ಅಧಿಕೃತವಾಗಿ ವ್ಯಕ್ತವಾಗದೇ ಉಲ್ಲೇಖಿಸದ ಹಲವು ಮೊತ್ತಗಳನ್ನು ಕಡಿತ ಮಾಡಿಕೊಳ್ಳಲು ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಜವಾಹರ್ ಮಿಲ್ಸ್‌ನ ವ್ಯವಸ್ಥಾಪಕರಿಗೆ ಸಲಹೆ ನೀಡಿರಿ.

(b) Sindhu working as a nurse in Gurusami Hospital, claims Bonus for the year '2001 and 2002'. Is she entitled for Bonus ?

ಸಿಂಧು ಎಂಬಾಕೆಯು ಗುರುಸಾಮಿ ಆಸ್ಪತ್ರೆಯಲ್ಲಿ ಶುಶ್ರೂಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಕೆಯು 2001 ರಿಂದ 2002 ರ ವರೆಗೆ ಬೋನಸ್‌ಗಾಗಿ ಬೇಡಿಕೆ ಇಟ್ಟಿರುತ್ತಾರೆ. ಈಕೆಯು ಬೋನಸ್ಸು ಪಡೆಯಲು ಅರ್ಹಳೇ ?

(c) The Government of Karnataka while introducing transport buses decides to give training only for women to become drivers in mini buses. Mr. Chethan, a worker challenged the order of the government as discrimination on the ground that he is denied of opportunities as a worker. Can Chethan succeed in his claim ?

ಕರ್ನಾಟಕ ಸರ್ಕಾರವು ಸಾರಿಗೆ ಬಸ್ಸುಗಳನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಅವುಗಳ ಚಾಲಕರಾಗಲು ಕೇವಲ ಮಹಿಳೆಯರಿಗೆ ಮಾತ್ರ ತರಬೇತಿ ನೀಡಲು ನಿರ್ಧರಿಸುತ್ತದೆ. ಶ್ರೀ ಚೇತನ್ ಎಂಬ ಕಾರ್ಮಿಕ ಸರ್ಕಾರದ ಈ ನಿರ್ಧಾರವು ತಾರತಮ್ಯವಾಗಿದೆ ಮತ್ತು ತಾನು ಕಾರ್ಮಿಕನಾಗಿ ಮುಂದುವರೆಯಲು ಇರುವ ಅವಕಾಶವನ್ನು ನಿರಾಕರಿಸುತ್ತದೆ ಎಂದು ಆಕ್ಷೇಪ ವ್ಯಕ್ತಪಡಿಸುತ್ತಾನೆ. ಶ್ರೀ ಚೇತನ್‌ರವರು ಈ ಪ್ರಕರಣದಲ್ಲಿ ಯಶಸ್ವಿಯಾಗುವರೇ ?

---